159ನೇ ದಿ
(30)

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್. ಅರುಣ್ ರವರು ನಿಯಮ 72 ರಡಿ ಮಂಡಿಸಿರುವ ಸೂಚನೆಗೆ ಉತ್ತರ**

**ಸೂಚನೆ:**

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ, (ತುಮಕೂರು, ಚಾಮರಾಜನಗರ, ಉಡುಪಿ, ದಕ್ಷಿಣ ಕನ್ನಡ ಇತ್ಯಾದಿ) ಸುಮಾರು ರೂ.40 ಕೋಟಿ ಮೌಲ್ಯದ ಸರ್ಕಾರಿ / ಸಿ.ಎ. (CA) ನಿವೇಶನಗಳನ್ನು ಕೇವಲ ರೂ.2 ಕೋಟಿಗಳ ಅತ್ಯಲ್ಪ ರಿಯಾಯಿತಿ ದರದಲ್ಲಿ, ಆಡಳಿತರೂಢ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕೆ ಮಂಜೂರು ಮಾಡಿರುವ ವಿಷಯದ ಬಗ್ಗೆ, ನಿಯಮ72 ರ ಅಡಿಯಲ್ಲಿ, ಮಾನ್ಯ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಚಿವ ಸಂಪುಟದ ನಿರ್ಣಯದಂತೆ ನಾಗರಿಕ ಸೌಲಭ್ಯ ನಿವೇಶನಗಳನ್ನು ಕಾಂಗ್ರೆಸ್ ಪಕ್ಷದ ಕಛೇರಿಗಳ ನಿರ್ಮಾಣಕ್ಕಾಗಿ ಮಂಜೂರು ಮಾಡಲಾಗಿರುವ ವಿವರಗಳನ್ನು **ಅನುಬಂಧ-1** ರಲ್ಲಿ ಲಗತ್ತಿಸಿದೆ (ಬಿ.ಡಿ.ಎ., ಬಿಬಿಎಂಪಿ ಮತ್ತು ಬಿಎಂಆರ್‌ಡಿಎ ಹೊರತುಪಡಿಸಿ).

ತುಮಕೂರು ಮಹಾನಗರ ಪಾಲಿಕೆ ಒಡೆತನದಲ್ಲಿರುವ ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಮರಳೂರು ಗ್ರಾಮ ಸ.ನಂ. 87/2 ರಲ್ಲಿನ 02ಎಕರೆ ಜಾಗಕ್ಕೆ ಉಪನೋಂದಣಾಧಿಕಾರಿಗಳ 2023-24 ನೇ ಸಾಲಿನ ಮಾರ್ಗಸೂಚಿ ಮೌಲ್ಯ ಎಕರೆ 01.00 ಕ್ಕೆ ರೂ.1,70,00,000/- ಗಳನ್ನು ನಿಗದಿಪಡಿಸಲಾಗಿರುತ್ತದೆ. ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ 396/2025, ದಿನಾಂಕ:22.05.2025 ರ ನಿರ್ಣಯದಂತೆ ಪ್ರಸ್ತುತ ಮಾರ್ಗಸೂಚಿ ಮೌಲ್ಯದ ಶೇ.05 ರಷ್ಟು ದರ ವಿಧಿಸಿ ಮಂಜೂರು ಮಾಡಲಾಗಿದೆ **(ಅನುಬಂಧ-2).**

ತುಮಕೂರು, ಚಾಮರಾಜನಗರ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ವ್ಯಾಪ್ತಿಗೆ ಬರುವ ನಗರಾಭಿವೃದ್ಧಿ ಮತ್ತು ಯೋಜನಾ ಪ್ರಾಧಿಕಾರಗಳಿಂದ ಕಾಂಗ್ರೆಸ್ ಪಕ್ಷದ ಕಛೇರಿ ನಿರ್ಮಾಣಕ್ಕಾಗಿ ಯಾವುದೇ ನಾಗರೀಕ ಸೌಲಭ್ಯ (ಸಿ.ಎ) ನಿವೇಶನವನ್ನು ಹಂಚಿಕೆ ಮಾಡಲಾಗಿರುವುದಿಲ್ಲ.

**ಸಂಖ್ಯೆ: ನಅಇ 270 ಬೆಂರೂಪ್ರಾ 2026**

**(ಡಾ. ಯತೀಂದ್ರ ಸಿದ್ದರಾಮಯ್ಯ)**
ನಗರಾಭಿವೃದ್ಧಿ ಸಚಿವರು

## ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಯೋಜನಾ ಪ್ರಾಧಿಕಾರಗಳು
## (ಬಿ.ಡಿ.ಎ, ಬಿಬಿಎಂಪಿ ಮತ್ತು ಬಿಎಂಆರ್‌ಡಿಎ ಹೊರತುಪಡಿಸಿ).
## ಅನುಬಂಧ-1

| ಕ್ರ. ಸಂ. | ನಗರಾಭಿವೃದ್ಧಿ ಪ್ರಾಧಿಕಾರ / ಯೋಜನಾ ಪ್ರಾಧಿಕಾರ / ಮಹಾನಗರ ಪಾಲಿಕೆಗಳ ಹೆಸರು ಹಾಗೂ ಹಂಚಿಕೆ ಮಾಡಿದ ಸಿ.ಎ. ನಿವೇಶನಗಳ ವಿವರ | ಸಿ.ಎ. ನಿವೇಶನದ ವಿಸ್ತೀರ್ಣ | ಸಿ.ಎ ನಿವೇಶನದ ಮೌಲ್ಯ (ರೂ.ಗಳಲ್ಲಿ) | ಸಚಿವ ಸಂಪುಟದ ನಿರ್ಣಯದಂತೆ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ರಿಯಾಯಿತಿ ದರದಲ್ಲಿ ಮಂಜೂರು ಮಾಡಿರುವ ವಿವರ |
|---|---|---|---|---|
| 1. | ಚಿಕ್ಕಬಳ್ಳಾಪುರ ನಗರಾಭಿವೃದ್ಧಿ ಪ್ರಾಧಿಕಾರ (ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಅಣಕನೂರು ಗ್ರಾಮ) | 3404.26 ಚ.ಮೀ. | 4,08,51,120/- | ಶೇ. 5 ರಷ್ಟು |
| 2. | ಬಾದಾಮಿ ನಗರ ಯೋಜನಾ ಪ್ರಾಧಿಕಾರ (ಬಾದಾಮಿ ಪಟ್ಟಣ) | 613.00 ಚ.ಮೀ. | 24,52,000/- | ಶೇ .10ರಷ್ಟು |
| 3. | ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರ (ಕೊಪ್ಪಳ ಗ್ರಾಮ) | 3749.85 ಚ.ಮೀ. | 1,31,31,975/- | ಶೇ. 5 ರಷ್ಟು |
| 4. | ಚನ್ನರಾಯಪಟ್ಟಣ ನಗರ ಯೋಜನಾ ಪ್ರಾಧಿಕಾರ (ಚನ್ನರಾಯಪಟ್ಟಣ ಅಮಾನಿಕೆರೆ ಗ್ರಾಮ) | 210 ಚ.ಮೀ. | 27,30,600/- | ಶೇ. 5 ರಷ್ಟು |
| 5. | ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ (ವಿವೇಕಾನಂದ ನಗರ ಬಡಾವಣೆ, ಮಂಡ್ಯ) | 1457.8 ಚ.ಮೀ. | 1,45,78,000/- | ಶೇ. 5 ರಷ್ಟು |
| 6 | ಗೌರಿಬಿದನೂರು ನಗರ ಯೋಜನಾ ಪ್ರಾಧಿಕಾರ (ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮ) | 1816.38 ಚ.ಮೀ. | 90,80,900/- | ಶೇ. 5 ರಷ್ಟು |
| 7. | ಮಾನವಿ ನಗರ ಯೋಜನಾ ಪ್ರಾಧಿಕಾರ (ಮಾನವಿ ತಾಲ್ಲೂಕಿನ ಮಾನವಿ ಗ್ರಾಮ) | 303 ಚ.ಮೀ. | 37,87,500/- | ಶೇ. 5 ರಷ್ಟು |
| 8. | ಶಹಾಪೂರ ನಗರ ಯೋಜನಾ ಪ್ರಾಧಿಕಾರ (ಹಳಿಸಗರ ಗ್ರಾಮ) | 2175.26 ಚ.ಮೀ. | 95,71,144/- | ಶೇ. 5 ರಷ್ಟು |
| 9. | ಬಸವಕಲ್ಯಾಣ ನಗರ ಯೋಜನಾ ಪ್ರಾಧಿಕಾರ (ಬಸವಕಲ್ಯಾಣ ತಾಲ್ಲೂಕು, ತ್ರಿಪೂರಾಂತ ಗ್ರಾಮ) | 707.47 ಚ.ಮೀ. | ----- | ಶೇ. 5 ರಷ್ಟು |
| 10. | ಲಿಂಗಸಗೂರು ನಗರ ಯೋಜನಾ ಪ್ರಾಧಿಕಾರ (ಲಿಂಗಸಗೂರು ತಾಲ್ಲೂಕು, ಹುಲಿಗುಡ್ಡ ಗ್ರಾಮ) | 1068.00 ಚ.ಮೀ. | 46,99,200/- | ಶೇ. 5 ರಷ್ಟು |

**2025-26 ನೇ ಸಾಲಿನಿಂದ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಹಂಚಿಕೆ ಮಾಡಲಾದ ಸಿ.ಎ. ನಿವೇಶನಗಳ ಮತ್ತು ಸ್ಥಳೀಯ ಸಂಸ್ಥೆ ನಿವೇಶನಗಳ ವಿವರಗಳು**

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆಗಳ ಹೆಸರು ಹಾಗೂ ಹಂಚಿಕೆ ಮಾಡಿದ ನಿವೇಶನಗಳ ವಿವರ | ನಿವೇಶನದ ವಿಸ್ತೀರ್ಣ | ನಿವೇಶನದ ಮೌಲ್ಯ (ರೂ.ಗಳಲ್ಲಿ) | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ |
|---|---|---|---|---|
| 1. | ಬಾಗಲಕೋಟೆ ಜಿಲ್ಲೆಯ ಲೋಕಾಪುರ ಪಟ್ಟಣ ಪಂಚಾಯಿತಿ ಒಡೆತನದ ಹಾಗೂ ಸಾರ್ವಜನಿಕ ಉದ್ದೇಶಕ್ಕಾಗಿ / ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741 **(ಸಿ.ಎ. ನಿವೇಶನ)** | 400.63 ಚ.ಮೀ. | 21,03,255 | UDD/8/TMD/2025 14.10.2025 |
| 2. | ಧಾರವಾಡ ಜಿಲ್ಲೆ ಅಣ್ಣಿಗೇರಿ ಪುರಸಭೆ ವ್ಯಾಪ್ತಿಯಲ್ಲಿನ ವಸತಿ ಬಡಾವಣೆಯಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ಸ್ವತ್ತಿನ ಸಂಖ್ಯೆ:23-505-322ಬಿ, ಪ್ಲಾಟ್ ನಂ.2 **(ಸಿ.ಎ. ನಿವೇಶನ)** | 1668.800 ಚ.ಮೀ. | 31,70,750 | UDD/11/TMD/2025 14.10.2025 |
| 3. | ಅಫಜಲಪೂರ ಪುರಸಭೆ ವ್ಯಾಪ್ತಿಯಲ್ಲಿನ ಸರ್ವೆ ನಂ: 354/12ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ನಿವೇಶನ ಸಂಖ್ಯೆ 5-5-875 **(ಸಿ.ಎ. ನಿವೇಶನ)** | 1120.60 ಚ.ಮೀ. | 50,42,700 | UDD/11/TMD/2025 14.10.2025 |
| 4. | ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿನ ರಿ.ಸ.ನಂ: 414/1ರಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನ ಸಂಖ್ಯೆ:99 **(ಸಿ.ಎ. ನಿವೇಶನ)** | 1287.77 ಚ.ಮೀ. | 38,60,310 | UDD/11/TMD/2025 14.10.2025 |
| 5. | ಮಾಗಡಿ ಪುರಸಭಾ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನ ಸಂಖ್ಯೆ: 118/2106/ 194 **(ಸ್ಥಳೀಯ ಸಂಸ್ಥೆಯ ನಿವೇಶನ)** | 4200 ಚ.ಅ. | 40,98,513 | UDD/11/TMD/2025 14.10.2025 |
| 6. | ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಪುರಸಭೆ ವ್ಯಾಪ್ತಿಯ ಗುತ್ತಿಗೇರಿ ಗ್ರಾಮದ ಬಿನ್‌ಶೆತ್ತಿ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಪುರಸಭೆ ಮಾಲೀಕತ್ವದ ಸಿಟಿಎಸ್ ನಂ. 3417 ಫ/39 **(ಸಿ.ಎ. ನಿವೇಶನ)** | 420.00 ಚ.ಮೀ. | 17,32,500 | UDD/24/TMD/2025 15.12.2025 |
| 7. | ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಪುರಸಭೆ ಮಾಲೀಕತ್ವದ ಖಾತೆ ಸಂಖ್ಯೆ:243/243/225, **(ಸ್ಥಳೀಯ ಸಂಸ್ಥೆಯ ನಿವೇಶನ)** | (90+94)/2*(225+230)/2 ಮತ್ತು (78+87)/2*(197+230)/2 ರಲ್ಲಿ 40*60 ಅಳತೆಯ ನಿವೇಶನ ಬಿಟ್ಟು ಇನ್ನುಳಿದ ಸಂಪೂರ್ಣ ಜಾಗ | - | UDD/24/TMD/2025 15.12.2025 |
| 8. | ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪುರಸಭೆ ಮಾಲೀಕತ್ವದ ಖಾತಾ ಸಂಖ್ಯೆ:1701/ಬಿ/112ಎ **(ಸ್ಥಳೀಯ ಸಂಸ್ಥೆಯ ನಿವೇಶನ)** | 85*83 ಅಡಿ | 32,77,154 | UDD/24/TMD/2025 15.12.2025 |
| 9. | ಶಿವಮೊಗ್ಗ ಜಿಲ್ಲೆಯ ಆನವಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೆ.ಎಂ.ಎಫ್ 24, ಸರ್ವೆ ನಂ. 8/16 ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಜಾಗ **(ಸಿ.ಎ. ನಿವೇಶನ)** | 390.13 ಚ. ಮೀ. | 35,11,170 | UDD/24/TMD/2025 15.12.2025 |

| | | | | |
|---|---|---|---|---|
| 10. | ದೇವನಹಳ್ಳಿ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:10ರ ಅಜ್ಮಲ್ ಬಡಾವಣೆಯ ಸಿ ಎ ನಿವೇಶನ ಆಸ್ತಿ ಸಂಖ್ಯೆ:3224/49/2/51/52/2 **(ಸಿ.ಎ. ನಿವೇಶನ)** | 6841.97 ಚ.ಮೀ. | 17,31,01,841 | UDD/36/TMD/2025 13.01.2026 |
| 11. | **ಕಾಳಗಿ ಪಟ್ಟಣ ಪಂಚಾಯಿತಿ** ವ್ಯಾಪ್ತಿಯಲ್ಲಿರುವ ಸರ್ವೆ ನಂ.230/3ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಜಾಗ **(ಸಿ.ಎ. ನಿವೇಶನ)** | 614.92 ಚ.ಮೀ. | 15,37,300 | UDD/36/TMD/2025 13.01.2026 |
| 12. | **ಚಿಂಚೋಳಿ** ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ.143/2ರಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಜಾಗ **(ಸಿ.ಎ. ನಿವೇಶನ)** | 1086.50 ಚ.ಮೀ. | 28,24,900 | UDD/36/TMD/2025 13.01.2026 |
| 13. | ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರಸಭೆ ವ್ಯಾಪ್ತಿಯಲ್ಲಿನ ರಿ.ಸ.ನಂ.75.ಅ/ಕರಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ / ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನ ಸಂಖ್ಯೆ: 32 **(ಸಿ.ಎ. ನಿವೇಶನ)** | 4498 ಚ.ಮೀ. | 3,82,33,000 | UDD/38/TMD/2025 07.05.2026 |
| 14. | ಬಾಗಲಕೋಟೆ ಜಿಲ್ಲೆಯ ಹುನಗುಂದ ಪುರಸಭೆ ವ್ಯಾಪ್ತಿಯಲ್ಲಿನ ರಿ.ಸ. ನಂ. 468/2 ರಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ / ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ನಿವೇಶನ ಸಂಖ್ಯೆ: 38 **(ಸಿ.ಎ. ನಿವೇಶನ)** | 312.12 ಚ.ಮೀ. | 10,92,420 | UDD/38/TMD/2025 07.05.2026 |
| 15. | ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಯಲಬುರ್ಗಾ ಪಟ್ಟಣ ಪಂಚಾಯತ್ ವ್ಯಾಪ್ತಿಯ ಸರ್ವೆ ನಂ. 209/2ರಲ್ಲಿನ ನಿವೇಶನ ಸಂಖ್ಯೆ 91 **(ಸಿ.ಎ. ನಿವೇಶನ)** | 1094.195 ಚ.ಮೀ. | 32,85,000 | UDD/38/TMD/2025 07.05.2026 |
| 16. | ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರಸಭೆ ವ್ಯಾಪ್ತಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ / ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಸಿ.ಟಿ.ಎಸ್. ನಂ. 5230/8 ರ ಮತ್ತು 5231/ಎ/108 ರ ನಿವೇಶನಗಳು **(ಸಿ.ಎ. ನಿವೇಶನ)** | 513 ಚ.ಮೀ. ಮತ್ತು 119 ಚ.ಮೀ. | 40,05,400 | UDD/7/TMD/2026 13.07.2026 |
| 17. | ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ಪುರಸಭೆ ವ್ಯಾಪ್ತಿಯ ಮಾಚೇನಹಳ್ಳಿ ಗ್ರಾಮದ ಬಡಾವಣೆಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ / ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಸಿ.ಟಿ.ಎಸ್. ನಂ. 83/1, 83/2 ಮತ್ತು 83/3 ನಿವೇಶನಗಳು **(ಸಿ.ಎ. ನಿವೇಶನ)** | 659.21 ಚ.ಮೀ. | 1,10,74,728 | UDD/61/GEL/2026 15.07.2026 |

14/8/2026

ಮಹಾಂತಪ್ಪ ಎಸ್. ತುರಕನೂರ
**ಸರ್ಕಾರದ ಅಧೀನ ಕಾರ್ಯದರ್ಶಿ**
**ನಗರಾಭಿವೃದ್ಧಿ ಇಲಾಖೆ**
**(ಪೌರಾಡಳಿತ-2 & ಮಂಡಳಿ)**

ಅನುಬಂಧ-2


# ತುಮಕೂರು ಮಹಾನಗರಪಾಲಿಕೆ, ತುಮಕೂರು

[illegible] : www.tumakurucity.mrc.gov.in [illegible] : 0816-2272200

[illegible] : ka.tumakuru.cc@gmail.com [illegible] : 9449872399


ಸಂಖ್ಯೆ.ತುಮಪಾ/ಕಂ.ಶಾ/ಸಿಆರ್/83/2026-27 ದಿನಾಂಕ:13.08.2026

ರವರಿಗೆ,
ಮಾನ್ಯ ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.

ಮಾನ್ಯರೆ,

**ವಿಷಯ:** ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾಂಗ್ರೆಸ್ ಪಕ್ಷದ ಕಚೇರಿಗಳಿಗೆ ಅತ್ಯಲ್ಪ ದರದಲ್ಲಿ ಸಿ.ಎ ಸೈಟ್‌ಗಳನ್ನು ಮಂಜೂರು ಮಾಡಿರುವ ಬಗ್ಗೆ.

**ಉಲ್ಲೇಖ:** 1. ಶ್ರೀ ಡಿ.ಎಸ್.ಅರುಣ್ ಮಾನ್ಯ ಸದಸ್ಯರು, ವಿಧಾನ ಪರಿಷತ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಗಮನ ಸೆಳೆಯುವ ಪ್ರಶ್ನೆ.

2. ಮಾನ್ಯ ಅಧೀನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ ರವರ ಪತ್ರ ಸಂಖ್ಯೆ:ಕವಿಪ/ಪ್ರಶಾ/30/159 ನೇಅ/ವಿ-72/2026 ದಿನಾಂಕ:11.08.2026

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಂತೆ ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಿಗೆ ಗಮನ ಸೆಳೆಯುವ ಪ್ರಶ್ನೆ ಕೇಳಿದ್ದು, ಉಲ್ಲೇಖ(2)ರಂತೆ ಮಾನ್ಯ ಅಧೀನ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್ತು, ಬೆಂಗಳೂರು ರವರು ಸದರಿ ಗಮನ ಸೆಳೆಯುವ ಪ್ರಶ್ನೆಗೆ ಉತ್ತರಿಸುವಂತೆ ಸೂಚಿಸಿರುತ್ತಾರೆ. ಅದರಂತೆ ಸದರಿ ಗಮನ ಸೆಳೆಯುವ ಪ್ರಶ್ನೆಗೆ ಈ ಕೆಳಕಂಡಂತೆ ಮಾಹಿತಿ/ಉತ್ತರವನ್ನು ಮಾನ್ಯರ ಅವಗಾಹನೆಗಾಗಿ ಸಲ್ಲಿಸಿದೆ.

| ಕ್ರ.ಸಂ | ಚುಕ್ಕೆ ಗುರುತಿನ ಪ್ರಶ್ನೆ | ಮಾಹಿತಿ/ಉತ್ತರ |
|---|---|---|
| 01 | ರಾಜ್ಯದ ವಿವಿಧ ಜಿಲ್ಲೆಗಳಲ್ಲಿ (ತುಮಕೂರು, ಚಾಮರಾಜನಗರ, ಉಡುಪಿ ಹಾಗೂ ದಕ್ಷಿಣ ಕನ್ನಡ ಇತ್ಯಾದಿ) ಸುಮಾರು 40 ಕೋಟಿ ರೂ. ಮೌಲ್ಯದ ಸರ್ಕಾರಿ/ಸಿಎ (CA) ನಿವೇಶನಗಳನ್ನು ಕೇವಲ ರೂ.2 ಕೋಟಿಗಳ ಅತ್ಯಲ್ಪ ರಿಯಾಯಿತಿ ದರದಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಕಚೇರಿಗಳ ನಿರ್ಮಾಣಕ್ಕೆ ಮಂಜೂರು ಮಾಡಿರುವ ವಿಷಯದ ಬಗ್ಗೆ. (ನಿಯಮ 72ರ ಅಡಿಯಲ್ಲಿ) | ಮಾನ್ಯ ಸರ್ಕಾರದ ಆದೇಶ ಸಂಖ್ಯೆ:ನಅಇ 78 ತುಮಪಾ 2024 (ಇ), ಬೆಂಗಳೂರು ದಿನಾಂಕ: 27.05.2025ರ ಆದೇಶದಂತೆ ತುಮಕೂರು ತಾಲ್ಲೂಕು, ಕಸಬಾ ದಕ್ಷಿಣ ಹೋಬಳಿ, ಮರಳೂರು ಗ್ರಾಮ ಸ.ನಂ.87/2ರಲ್ಲಿನ 02 ಎಕರೆ ಜಾಗವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ರವರಿಗೆ 2023-24ನೇ ಸಾಲಿನ ಮಾರ್ಗಸೂಚಿ ಮೌಲ್ಯದ (ಪ್ರತಿ ಎಕರೆಗೆ 1 ಕೋಟಿ 70 ಲಕ್ಷಗಳು) ಶೇ.5 ರಷ್ಟು ದರ ವಿಧಿಸಿ ಕರ್ನಾಟಕ ಸರ್ಕಾರದಿಂದ ಮಂಜೂರು ಮಾಡಲಾಗಿರುತ್ತದೆ. |

ವಂದನೆಗಳೊಂದಿಗೆ,

ಆಯುಕ್ತರು,
ತುಮಕೂರು ಮಹಾನಗರಪಾಲಿಕೆ,
ತುಮಕೂರು.